## ಟೇಪ್ ರೆಕಾರ್ಡರ್

ಮುಂಜಾನೆ ಹಾಡುಗಳ ಮೂಲಕ ತನ್ನ ದಿನಚರಿ ಆರಂಭಿಸುತ್ತಿದ್ದ ಟೇಪ್ ರೆಕಾರ್ಡರ್ ಈಗ ಮೂಲೆ ಸೇರಿದೆ. ಮ್ಯಾಗ್ನೆಟಿಕ್ ಟೇಪ್‌ನಿಂದ ಧ್ವನಿ ರೆಕಾರ್ಡ್ ಮಾಡಲು ಸಹಕಾರಿಯಾಗಿದ್ದ ಈ ಟೇಪ್ ರೆಕಾರ್ಡರ್ ಹೊಸ ತಂತ್ರಜ್ಞಾನಗಳ ಅನ್ವೇಷಣೆಯಿಂದ ದೂಳು ಹಿಡಿದಿದೆ. ಮಕ್ಕಳ ಪದ್ಯಗಳನ್ನು ಪ್ರಸಾರ ಮಾಡಲುಮುಖ್ಯ ಪಾತ್ರ ವಹಿಸಿದ್ದು ಈ ಸಾಧನವೇ. ನಾವಾಗಲೇ, ಮೊಬೈಲ್ ರೆಕಾರ್ಡಿಂಗ್‌ಗೆ ಅದ್ದೂರಿಯ ಚಾಲನೆಯನ್ನು ಕೊಟ್ಟು, ಅದರ ಕಾರ್ಯಚಟುವಟಿಕೆಗೆ ವಿರಾಮವನ್ನು ಇತ್ತಿದೆ. ಟೇಪ್ ರೆಕಾರ್ಡರ್‌ನಲ್ಲಿ ಆಲಿಸುತ್ತಿದ್ದ ಆಕಾಶವಾಣಿ ಪ್ರಸಾರವು ಮೊಬೈಲ್ ಅಪ್ಲಿಕೇಷನ್‌ಗಳಿಗೆ ಹಸ್ತಾಂತರಗೊಂಡಿದೆ. ಈಗಾಗಲೇ ಅಪರೂಪದ ಅತಿಥಿಯಾಗಿರುವ ಟೇಪ್ ರೆಕಾರ್ಡರ್, ಮುಂದಿನ ಪೀಳಿಗೆಗೆ ಬರೀ ಚಿತ್ರದ ಗುರುತು ಮಾತ್ರ.

–ಧನ್ಯಶ್ರೀ ಅಮ್ಮುಂಜ, ಸುಳ್ಯ






## ಅರಮನೆಯಲ್ಲೊಂದು ಅಚ್ಚರಿ ಕಲ್ಲು

ವಿಟ್ಲ ಅರಮನೆಯಲ್ಲಿರುವ ಒಂದು ಕಲ್ಲು ತುಂಬಾ ವಿಶೇಷವಾದುದ್ದು. ಸಾಕಷ್ಟು ಇತಿಹಾಸವನ್ನು ಕಂಡಿರುವ ಈ ಕಲ್ಲನ್ನು ನಿರ್ಮಿಸಿದ್ದು ಯಾರು ಅನ್ನೋದರ ಬಗ್ಗೆ ಯಾರಿಗೂ ತಿಳಿಯದಿದ್ದರೂ ಕಲ್ಲು ಹಿಂದೊಮ್ಮೆ ಪೈಲ್ವಾನ್‌ಗಳ ಶಕ್ತಿ ಪ್ರದರ್ಶನಕ್ಕೆ ಮಾರ್ಗವಾಗಿತ್ತು ಅನ್ನೋದು ನಿಜ. ಈ ಕಲ್ಲಿನ ಮೇಲೆ ತುಳು ಲಿಪಿ ಇದ್ದು ಇದನ್ನು ಶಕ್ತಿ ಕಲ್ಲು ಎಂದೂ ಕರೆಯಲಾಗುತ್ತದೆ. ಸೌರಮಾನ ಯುಗಾದಿಯಂದು ಊರಿನವರ ಸಮ್ಮುಖದಲ್ಲಿ ಕಲ್ಲನ್ನು ಎತ್ತಿ ಶಕ್ತಿ ಪ್ರದರ್ಶನ ನಡೆಯುತ್ತಿತ್ತು ಎಂಬುದು ಐತಿಹ್ಯ. ಕ್ರಮೇಣ ಇದು ಶಕ್ತಿ ಕಲ್ಲು ಎಂದು ಹೆಸರು ಪಡೆಯಿತಂತೆ. ನಂತರ ನವರಾತ್ರಿಯ ಸಮಯದಲ್ಲಿ ನಗರ ಭಜನೆ ದಿವಸದಂದು ಕಲ್ಲಿನ ಮೇಲ್ಭಾಗಕ್ಕೆ ಸಂಪೂರ್ಣ ಎಣ್ಣೆ ತುಂಬಿ, ಅದರ ಸುತ್ತಲೂ ಭಜನೆ ಮಾಡುತ್ತ, ಕುಣಿಯುತ್ತ ಬರಲಾಗಿದೆ.

–ಪೃಥ್ವಿರಾಜ್ ಜೆ.ಆರ್., ಬಂಟ್ವಾಳ

## ಹಕ್ಕೆ... ಹಾರ್ಬಂತ...

ಹಕ್ಕೆ ಹಾರ್ಬಂತ
ಗೂಡ ಕಟ್ತ
ಮೊಟ್ಟೆ ಹಾಕ್ತ
ಕಾವ ಕುಡ್ತ
ಮರಿ ಉಡಿತ
ಎರಿ ಉಣ್‌ಸ್ತಾ
ರೆಕ್ಕೆ ಬಲಿತ
ಮರಿ ದೊಡ್ಡಾಯ್ತು
ಅಜ್ಜಿಮಾನಿಗೆ, ಹೋಗು ಹಾದ್ಯಾವ್ದ ಕೇಳ್ತ...

ನಾವು ಚಿಕ್ಕವರಿರುವಾಗ ಸಣ್ಣ ಮಕ್ಕಳನ್ನು ಆಡಿಸುತ್ತಾ, ಅವರನ್ನೂ ಈ ಹಾಡಿನ ಪಾತ್ರಧಾರಿಗಳನ್ನಾಗಿ ರೂಪಿಸುವ ಈ ಹಾಡನ್ನು ಇಂದು ಹಾಡುವವರು ಇಲ್ಲದೇ, ಕೇಳುವವರೂ ಇಲ್ಲದೇ ಸಂಪೂರ್ಣ ಮರೆಯಾಗಿ ಹೋಗಿದೆ. ಸಾಮಾನ್ಯವಾಗಿ ಮಗುವಿನ ತಾಯಿ ಹಾಗೂ ಅಜ್ಜಿ ಮಗುವನ್ನು ತೊಡೆಯ ಮೇಲೆ ಕೂರಿಸಿಕೊಂಡು, ಇನ್ನೊಬ್ಬರು ಮಗುವಿನ ಬಲಗೈಯನ್ನು ಹಿಡಿದು ಹಸ್ತದ ಮೇಲೆ ಹಸ್ತವಿಡುತ್ತಾ, ಹಾಡುತ್ತಾ, ಕೊನೆಯಲ್ಲಿ ಅಜ್ಜಿಮನೆ ದಾರಿ ತೋರಿಸುವಾಗ ಬೆರಳನ್ನು ಕಾಲಿನಂತೆ ಬಳಸಿ ನಡೆಯುತ್ತಾ ಕಂಕುಳಲ್ಲಿ ಕಚಗುಳಿ ಇಟ್ಟು ಸಂತಸ ಪಡುತ್ತಿದ್ದರು.

ಇದು ಬರಿ ಮಗುವನ್ನು ಆಡಿಸುವ ಹಾಡಾಗಿರದೆ ಹಕ್ಕಿ ಪರಿಸರದ ಸಂಕೇತವಾಗಿ, ಅಜ್ಜಿ ಮನೆಗೆ ಹೋಗುವ ಪರಿ ಪ್ರೀತಿ ಮತ್ತು ಬಂಧುಗಳ ಸಂಕೇತವಾಗಿ ನಿಲ್ಲುತ್ತದೆ. ಪ್ರಕೃತಿಯಲ್ಲಿ ಪಶುಪಕ್ಷಿಗಳು ಕೂಡ ನಮ್ಮಂತೆ ಬದುಕಿ ಬಾಳುವ ಪ್ರಾಕೃತಿಕ ಹಕ್ಕನ್ನು ಹೊಂದಿರುತ್ತವೆ ಎಂಬುದನ್ನು ಎಳೆ ಮನಸ್ಸಿನ ಮೇಲೆ ಎಳೆ ಎಳೆಯಾಗಿ ಬಿತ್ತುವ ಈ ಹಾಡಿನ ಔಚಿತ್ಯ ಸುಂದರವಾದ ಆಡುಭಾಷೆಯ ಕಾವ್ಯವಾಗಿ ಕಾಣುತ್ತದೆ. ಇಂದಿನ ಬೇಬಿ ಸಿಟಿಂಗ್‌ನ ವ್ಯವಸ್ಥೆ, ಅನಾರೋಗ್ಯಕರ ಸ್ಪರ್ಧೆ, ಎಲ್‌ಕೆಜಿ, ಯುಕೆಜಿಗಳ ಪ್ರಭಾವದಿಂದಾಗಿ ಚಿಕ್ಕ ಮಕ್ಕಳು ಇಂತಹ ಭಾವಪೂರ್ಣ ಹಾಡಿನಿಂದ ದೂರವಾಗಿದ್ದಾರೆ.

–ಬೀರಣ್ಣ ನಾಯಕ ಮೊಗಟಾ

